ಮರು ಓದು

# ಕೆರೆಗೆ ಹಾರ

## ಹೆಣ್ಣು ಬಂಧುತ್ವ ವ್ಯವಸ್ಥೆ ಮತ್ತು ಪಠ್ಯಲೋಕ



**ಗಾಯತ್ರಿ ನಾವಡ**

ಕಲೆ: ಬಸವರಾಜ ಕಲೆಗಾರ

ಪ್ರಾಥಮಿಕ ಶಾಲಾ ದಿನಗಳಲ್ಲಿ ನನ್ನನ್ನು ಭಾವುಕವಾಗಿ ಸೆಳೆದ, ಕಣ್ಣೀರು ಬರಿಸಿದ ಪಠ್ಯಗಳು ಎರಡು – ಒಂದು ಸತ್ಯದ ಕಥೆಯ 'ಪುಣ್ಯಕೋಟಿ', ಇನ್ನೊಂದು ಸುಳ್ಳಿನ ಕಥೆಯ 'ಕೆರೆಗೆ ಹಾರ'. ನಮ್ಮ ಟೀಚರ್ ಈ ಎರಡೂ ಕಥನಕವನವನ್ನು ಹಾಡಿ ಪಾಠಮಾಡಿದ್ದಷ್ಟೇ ಅಲ್ಲ, ನಮ್ಮಿಂದ ಹಾಡಿಸಿ ಆಡಿಸಿ ಮನಮುಟ್ಟಿದ್ದು, ಇಂದೂ ಕಣ್ಣ ಮುಂದೆ ಬಿಚ್ಚಿಕೊಳ್ಳುವ ಗಾಢ ನೆನಪು. ಬಾಲ್ಯದ ಆ ನೋವು ದುಃಖ ಮುಂದೆ ನನ್ನನ್ನು ಬಹುಕಾಲದಿಂದ ಕಾಡುತ್ತ ಕಲಕುತ್ತ ಬಂದಿದೆ. ಹಾಗೆ ಕಾಡುವ ಪ್ರಶ್ನೆಗಾಗಿ ಉತ್ತರದ ಹುಡುಕಾಟದಲ್ಲಿ, ಸತ್ಯ ಬಗೆಯುವ, ಶೋಧಿಸುವ ಚಡಪಡಿಕೆಯಲ್ಲಿ 'ಕೆರೆಗೆ ಹಾರ'ದ ಅಧ್ಯಯನಕ್ಕೆ ನಾನು ತೊಡಗಿದ್ದು.

'ಕೆರೆಗೆ ಹಾರ' ಸೊಸೆಹೆಣ್ಣು ಹೊಸಕೆರೆಗೆ ಹಾರವಾದ ಕಥೆಯನ್ನು ಹೇಳುವ ಕನ್ನಡದ ಕಥನಕವನ. ಈ ಆಶಯದ ವಿಭಿನ್ನ ಜನಪದ ಪ್ರಕಾರಗಳು ಜಗತ್ತಿನಲ್ಲೆಲ್ಲ ಜನಜನಿತವಾಗಿವೆ. ಕನ್ನಡದಲ್ಲಿ ಬೆಟಗೇರಿ ಕೃಷ್ಣಶರ್ಮರು 1940ರಲ್ಲಿ (ಜಯಕರ್ನಾಟಕ ಪತ್ರಿಕೆ) ಮೊದಲ ಬಾರಿ 'ಕೆರೆಗೆ ಹಾರ' ಪಠ್ಯವನ್ನು ಪ್ರಕಟಿಸಿದರು. ಅಲ್ಲಿಂದ ಸುಮಾರು ಎಂಟು ದಶಕಗಳಿಗೂ ಮೀರಿದ ಈ ಅವಧಿಯಲ್ಲಿ 'ಕೆರೆಗೆ ಹಾರ'ದ ಬಹುಪಠ್ಯಗಳು ಹಾಗೂ ಅದನ್ನು ಕುರಿತು ವಾಗ್ವಾದ, ವ್ಯಾಖ್ಯಾನಗಳು ಪ್ರಕಟವಾಗುತ್ತ ಬಂದಿವೆ. ನಾನಿಲ್ಲಿ ಕರ್ನಾಟಕದ ವಿಭಿನ್ನ ಪ್ರಾದೇಶಿಕ, ಸಾಂಸ್ಕೃತಿಕ ಪರಿಸರದ 'ಕೆರೆಗೆ ಹಾರ'ದ ಆರು ಪಠ್ಯಗಳನ್ನು ಆಯ್ದುಕೊಂಡು (ಕರಾವಳಿಯ ಮೂರು ಪಠ್ಯ ಹಾಗೂ ಕರಾವಳಿಯೇತರ ಭಾಗದ ಮೂರು ಪಠ್ಯ) ಸ್ತ್ರೀವಾದಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಪಠ್ಯ – ಸಂಗ್ರಹ:

1. ಕೆರೆಗೆ ಹಾರ – ಬೆಟಗೇರಿ ಕೃಷ್ಣ ಶರ್ಮ
2. ಹುಳಿಯಾರ ಕೆಂಚಮ್ಮ – ಜೀಶಂ ಪರಮಶಿವಯ್ಯ
3. ಮದಗದ ಕೆಂಚಮ್ಮ– ಬಳ್ಳಕೆರೆ ಹನುಮಂತಪ್ಪ
4. ನಿಗಳ ಬಲಿ –ಸುಬ್ರಹ್ಮಣ್ಯ ಕೆದಿಲಾಯ
5. ಹೊಸಕೆರಿ ಹೊಸಬಾಮಿ –ಗಾಯತ್ರಿ ನಾವಡ
6. ಕೆರೆಗೆ ನರಬಲಿ –ವರಮಹಾಲಕ್ಷ್ಮಿ ಹೊಳ್ಳ

ಮೊದಲ ಮೂರು ಕಥನಗೀತೆಗಳು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ಪಿತೃರೂಪಿ ಸಂಸ್ಕೃತಿಯ ಪಠ್ಯಗಳು. ಮತ್ತಿನ ಮೂರು ಕಥನಗೀತೆಗಳು ಕರಾವಳಿ ಕರ್ನಾಟಕದ ಮಾತೃರೂಪಿ